I/444103/2023

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ: E- 1096150 DPUE-EST10OTRS/148/2023-PLCY

ದಿನಾಂಕ: 22-06-2023

## ಜ್ಞಾಪನ

**ವಿಷಯ:** 2023-24 ನೇ ಸಾಲಿನ ಪ್ರಾಂಶುಪಾಲರ / ಉಪನ್ಯಾಸಕರ ಸಾರ್ವತ್ರಿಕ ವರ್ಗಾವಣೆಗೆ ಅರ್ಹತಾದಾಯಕ ಅಂಕ (Weighted Score) ಗಳನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020, ದಿನಾಂಕ:27-03-2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 47 ಶಾಸನ 2021, ದಿನಾಂಕ: 18-01-2022.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿನಾಂಕ: 12-05-2022.
4. ಈ ಕಚೇರಿಯ ಜ್ಞಾಪನ ಸಂಖ್ಯೆ: E-1096150 DPUE-EST10OTRS/148/2023-PLCY, ದಿನಾಂಕ:02.06.2023.

*****

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020 ರನ್ವಯ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಪ್ರಾಂಶುಪಾಲರು / ಉಪನ್ಯಾಸಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2022 ರ ನಿಯಮ 4 (ಹೆಚ್) ರಲ್ಲಿ ಉಲ್ಲೇಖಿಸಿರುವಂತೆ ವರ್ಗಾವಣೆ ವೇಳಾಪಟ್ಟಿ ಪ್ರಕಟಿಸುವ ಮೊದಲು ಪ್ರಾಂಶುಪಾಲರ / ಉಪನ್ಯಾಸಕರ ಅರ್ಹತಾದಾಯಕ ಅಂಕ (Weighted Score) ಗಳನ್ನು ಪ್ರಕಟಿಸುವ ಸಂಬಂಧ ವೇತನ ಸೆಳೆದು ವಿತರಣೆ ಮಾಡುವ ಅಧಿಕಾರಿಯು (D.D.O.) Departmental Online Portal ನ ಲಾಗಿನ್ ಮೂಲಕ ಪ್ರಾಂಶುಪಾಲರ / ಉಪನ್ಯಾಸಕರ ಸೇವಾ ವಿವರಗಳನ್ನು ನವೀಕರಿಸಲು (Update) ದಿನಾಂಕ:05-06-2023 ವರೆಗೆ ಉಲ್ಲೇಖ-4ರಲ್ಲಿ ಅವಕಾಶಕಲ್ಪಿಸಲಾಗಿತ್ತು. ಅದರಂತೆ, ಪ್ರಾಂಶುಪಾಲರಿಂದ ನವೀಕರಿಸಲ್ಪಟ್ಟ (updated) ಸೇವಾ ವಿವರಗಳನ್ವಯವೇ ಯಥಾವತ್ತಾಗಿ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವ ಪ್ರಾಂಶುಪಾಲರ/ಉಪನ್ಯಾಸಕರ ಅರ್ಹತಾದಾಯಕ ಅಂಕ (Weighted Score) ಗಳ ತಾತ್ಕಾಲಿಕ ಪಟ್ಟಿಯನ್ನು ಸಿದ್ದಪಡಿಸಿ, ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ಪ್ರಕಟಿಸಲಾಗಿದೆ.

ಪ್ರಕಟಿಸಲ್ಪಟ್ಟ ಅರ್ಹತಾದಾಯಕ ಅಂಕಪಟ್ಟಿಗೆ ಅಕ್ಷೇಪಣೆಗಳು ಏನಾದರೂ ಇದ್ದಲ್ಲಿ, ಪೂರಕ ದಾಖಲೆಗಳನ್ನು ಪ್ರಾಂಶುಪಾಲರ ದೃಢೀಕರಣದೊಂದಿಗೆ ದಿನಾಂಕ: 27-06-2023 ರೊಳಗಾಗಿ ಜಂಟಿ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ dpuetransfer22@gmail.com ಇ-ಮೇಲ್ ಮೂಲಕ ಕಡ್ಡಾಯವಾಗಿ ಸಲ್ಲಿಸುವುದು. ನಿಗದಿತ **ದಿನಾಂಕದ ನಂತರ ಯಾವುದೇ ಅಕ್ಷೇಪಣೆಗಳನ್ನು** ಪರಿಗಣಿಸುವುದಿಲ್ಲ.

*ಪ್ರಾಂಶುಪಾಲರ / ಉಪನ್ಯಾಸಕರ ಸೇವಾ ವಿವರಗಳನ್ನು ತಪ್ಪಾಗಿ ನವೀಕರಿಸಿದ್ದರೆ ಅಥವಾ ನಮೂದಿಸಿದ್ದರೆ (Update / Entry), ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿದ್ದು, ಅವರ ಮೇಲೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.*

I/444103/2023

**ವಿಶೇಷ ಸೂಚನೆ:**

1. ಉಲ್‌ಲೇಖ-3ರ 2022ರ ಅಧಿಸೂಚನೆಯ ನಿಯಮ 4 (ಡಿ) ರಲ್ಲಿ ಉಲ್ಲೇಖಿಸಿರುವಂತೆ, ಒಂದು ವೇಳೆ ಪ್ರಾಂಶುಪಾಲರ/ಉಪನ್ಯಾಸಕರ ಅರ್ಹತಾದಾಯಕ ಅಂಕಗಳು ಸಮನಾಗಿದಲ್ಲಿ, ಅವರ ಸೇವೆಗೆ ಸೇರಿದ ದಿನಾಂಕದ ಅಧಾರದ ಮೇಲೆ ಜೇಷ್ಠತೆಯನ್ನು ಪರಿಗಣಿಸಲಾಗುವುದು. ಸೇವೆಗೆ ಸೇರಿದ ದಿನಾಂಕವು ಒಂದೇ ಇದ್ದಲ್ಲಿ ಅವರ ಜನ್ಮದಿನಾಂಕದ ಅಧಾರದ ಮೇಲೆ ಜೇಷ್ಠತೆಯನ್ನು ಪರಿಗಣಿಸಲಾಗುವುದು.
2. ಉಲ್ಲೇಖ-3ರ 2022ರ ಅಧಿಸೂಚನೆಯ ನಿಯಮ 4 (ಜಿ) ರನ್ವಯ ಅಂತಿಮ ಅರ್ಹತಾದಾಯಕ ಅಂಕಗಳನ್ನು ಇಲಾಖೆ ಜಾಲತಾಣದಲ್ಲಿ ಪ್ರಕಟಿಸಿದ ನಂತರ ವರ್ಗಾವಣೆ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೆ ಯಾವುದೇ ಬದಲಾವಣೆಯನ್ನು ಮಾಡಲಾಗುವುದಿಲ್ಲ.

Signed by Raju N
Date: 22-06-2023 21:11:34

ಜಂಟಿ ನಿರ್ದೇಶಕರು (ಆಡಳಿತ),
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಇವರಿಗೆ,**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ - ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ - ಜಿಲ್ಲಾ ಉಪ ನಿರ್ದೇಶಕರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ - ಪ್ರಾಂಶುಪಾಲರ ಮೂಲಕ ಅಗತ್ಯ ಕ್ರಮಕ್ಕಾಗಿ.

**ಪ್ರತಿಗಳು,**

1. ನಿರ್ದೇಶಕರು / ಜಂಟಿ ನಿರ್ದೇಶಕರು(ಆಡಳಿತ) / (ಮಾನ್ಯತೆ ಮತ್ತು ಅನುದಾನ) / (ಶೈಕ್ಷಣಿಕ) ಇವರ ಆಪ್ತ ಶಾಖೆಗೆ.
2. ಸಹಾಯಕ ನಿರ್ದೇಶಕರು - ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ- ಇವರಿಗೆ ಇಲಾಖಾ ಜಾಲತಾಣದಲ್ಲಿ ಅಳವಡಿಸಲು.
3. ಕಚೇರಿ ಪ್ರತಿ.